222 (406) ಶ್ರೀ ಡಿ ಆರ್ ಪಾಟೀಲ್ (ಗದಗ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ರಾಜ್ಯದ ಸಹಕಾರಿ ಪತ್ತಿನ ಸಂಘಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಬೆಳೆಸಾಲ ಪಡೆದು ಕೊಂಡ ರೈತರೆಷ್ಟು ಅವರೆಲ್ಲರೂ ಪಡೆದುಕೊಂಡ ಸಾಲದ ಹಣವೆಷ್ಟು ಪ್ರತಿ ವರ್ಷದ ವಿವರ ನೀಡುವುದು)

2) ಈ ವರ್ಷ ಸರ್ಕಾರ ಘೋಷಿಸಿರುವ ಸಾಲ ಮನ್ನಾ ಬಡ್ಡಿ ಮನ್ನಾದ ಲಾಭ ಪಡೆದುಕೊಂಡ ರೈತರ ಸಂಖ್ಯೆ ಎಷ್ಟು ಅವರಿಗಾದ ಲಾಭ ಎಷ್ಟು ಇವರಲ್ಲಿ ಮರುಸಾಲ ಪಡೆದುಕೊಂಸ ರೈತರೆಷ್ಟು ಮರುಸಾಲ ಸಿಗದೆ ತೊಂದರೆಗೊಳಗಾದ ರೈತರೆಷ್ಟು ಇವರಿಗೆ ಸಾಲ ಕೊಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು, ಹೋದ ವರ್ಷ ಜೂನ್ 30 ರವರೆಗೆ ಬೆಳೆಸಾಲ ಪಡೆದ ರೈತರೆಷ್ಟು ಅವರಿಗೆ ಕೊಟ್ಟ ಸಾಲದ ಮೊತ್ತ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು),

3) ಸಾಲ ಮನ್ನಾ ಬಡ್ಡಿ ಮನ್ನಾ ಘೋಷಣೆಯಿಂದ ಸರ್ಕಾರ ಸಹಕಾರಿ ಸಂಘಗಳಿಗೆ ಕೊಡಬೇಕಾಗಿರುವ ಹಣ ಎಷ್ಟು, ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಿರುವ ಹಣ ಎಷ್ಟು ಉಳಿದ ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು,

4) ಇದಕ್ಕೆ ಬೇಕಾಗುವ ಸಮಯ ಎಷ್ಟು,

5) ಈಗಿನ ವ್ಯವಸ್ಥೆಯಲ್ಲಿ ಹಾಗೂ ಪರಿಸ್ಥಿತಿಯಲ್ಲಿ ಸಾಲ ಮನ್ನಾ ಬಡ್ಡಿ ಮನ್ನಾ ಘೋಷಣೆ ರೈತ ಸಮುದಾಯಕ್ಕೆ ಅನುಕೂಲವೋ ಅಥವಾ ಪ್ರತಿಕೂಲವೋ?

ಶ್ರೀ ಜಿ ಟಿ ದೇವೆಗೌಡ

ಕಳೆದ ಮೂರು ವರ್ಷಗಳಲ್ಲಿ ಬೆಳೆಸಾಲ ಪಡೆದುಕೊಂಡ ರೈತರ ಸಂಖ್ಯೆ ಮತ್ತು ಪಡೆದುಕೊಂಡ ಹಣದ ಮೊತ್ತದ ವಿವರಗಳು ಇಂತಿವ

(ರೂ ಕೋಟಿಗಳಲ್ಲಿ)

ವರ್ಷ	ಸಂಖ್ಯೆ	ಮೊತ್ತ
2004–05	670815	1188 08
2005–06	1067700	2331 34
2006–07	826125	2082 40

1) ಈ ವರ್ಷ ಸರ್ಕಾರ ಘೋಷಿಸಿದ ಸಾಲ ಮನ್ನಾ ಬಡ್ಡಿ ಮನ್ನಾದ ಲಾಭ ಪಡೆದುಕೊಂಡ ರೈತರ ಸಂಖ್ಯೆ 1045286ರ ಹಾಗೂ ಮೊತ್ತ ರೂ 2300 00 ಕೋಟಿ ಎಂದು ಅಂದಾಜಿಸಲಾಗಿದೆ

2) ಇವರಲ್ಲಿ ಮರುಸಾಲ ಪಡೆದುಕೊಂಡ ರೈತರ ಸಂಖ್ಯೆ 344266 2007 ಜೂನ್ ಅಂತ್ಯದವರೆಗೆ ರೂ 1061 49 ಕೋಟಿ ಮರುಸಾಲ ನೀಡಲಾಗಿದೆ

3) ಮರುಸಾಲ ಸಿಗದೆ ತೊಂದರೆಗೊಳಗಾದ ರೈತರಿಗೆ ಸಾಲ ನೀಡಲು ಸರ್ಕಾರವು ಸಾಲ ಮನ್ನಾ, ಬಡ್ಡಿ ಮನ್ನಾ, ಯೋಜನೆಯಡಿ ಈವರೆಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ರೂ 750 00ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ

4) ಹೋದ ವರ್ಷ ಏಪ್ರಿಲ್ ಮಾಹೆಯಿಂದ ಜೂನ್ 30 ರ ಅವಧಿಯಲ್ಲಿ 3,11,318 ರೈತರಿಗೆ ರೂ 909 36 ಕೋಟಿಗಳ ಬೆಳೆಸಾಲ ನೀಡಲಾಗಿರುತ್ತದೆ

3)&4) ಸಾಲ ಮನ್ನಾ–ಬಡ್ಡಿ ಮನ್ನಾ ಘೋಷಣೆಯಿಂದ ಸರ್ಕಾರ ಸಹಕಾರಿ ಸಂಘಗಳಿಗೆ ರೂ 23,300 00ಕೋಟಿಗಳನ್ನು ಭರಿಸಿ ಕೊಡ ಬೇಕಾಗಿರುತ್ತದೆಂದು ಅಂದಾಜಿಸಲಾಗಿದೆ

ಈಗಾಗಲೇ ರೂ 750 00ಕೋಟಿಗಳನ್ನು ಸಹಕಾರ ಸಂಘಗಳಿಗೆ ಸಾಲ ಮನ್ನಾ ಬಡ್ಡಿಮನ್ನಾ ಯೋಜನೆಯಡಿಯಲ್ಲಿ ಭರಿಸಿಕೊಡಲಾಗಿದೆ ಉಳಿದ ಹಣವನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡಲಾಗುವುದು

5) ಅನುಕೂಲಕರವಾಗಿದೆ

223 (122) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಡಿತರ ಕಾರ್ಡ್ ಗಳ ವಿತರಣೆಗಾಗಿ ಫಲಾನುಭವಿ ಗಳನ್ನು ಗುರುತಿಸಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು),

ಆ) ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಪಡಿತರ ಫಲಾನುಭವಿ ಗಳನ್ನು ಆಯ್ಕೆ ಮಾಲಾಗಿದೆಯೇ, (ಗ್ರಾಮವಾರು ವಿವರ ನೀಡುವುದು)

ಇ) ಸದರಿ ಫಲಾನುಭವಿಗಳಿಗೆ ಯಾವಾಗ ಕಾರ್ಡ್ ಗಳನ್ನು ವಿತರಿಸ ಲಾಗುತ್ತಿದೆ, ವಿಳಂಬಕ್ಕೆ ಕಾರಣಗಳೇನು?

ಶ್ರೀ ಗೋವಿಂದ ಎಂ, ಕಾರ್ಜೋಳ

ಅ) ಹೌದು ರಾಜ್ಯದಲ್ಲಿ ಗುರುತಿಸಿದ ಫಲಾನುಭವಿಗಳ ತಾಲ್ಲೂಕುವಾರು ವಿವರವನ್ನು ಅನುಬಂದ–1ರಲ್ಲಿ ಲಗತ್ತಿಸಿದೆ

ಆ) ಹೌದು,